"ನಡೆಯಿರಿ..."

★★★

"ಗೆಳೆಯರೆ, ಇದು ಜಪಾನಿನಲ್ಲಿ ನಡೆದ ಅತಿದೊಡ್ಡ ಅಣು ದುರಂತ. ದುರಂತ ಸಂಭವಿಸಿದ ಕೆಲವೇ ಕ್ಷಣಗಳಲ್ಲಿ ಸ್ಥಾವರವನ್ನು ಸ್ಥಗಿತಗೊಳಿಸಲಾಗಿದೆ. ಉದ್ಯೋಗಿಗಳನ್ನೆಲ್ಲಾ ಫುಕುಶಿಮಾದಿಂದ ಈಗಾಗಲೇ ಹೊರಗೆ ಕಳಿಸಿಬಿಟ್ಟಿದ್ದೇವೆ. ವಿಕಿರಣ ತಗುಲಿದವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಗಿದೆ. ಪ್ರಸ್ತುತ ನಾವು ಫುಕುಶಿಮಾವನ್ನು ಕಾಪಾಡಿಕೊಳ್ಳಬೇಕಾಗಿದೆ. ಪರಮಾಣು ಸ್ಥಾವರದಲ್ಲಿ ಸಂಭವಿಸಿದ ಸ್ಫೋಟದ ಪರಿಣಾಮವಾಗಿ ವಿಕಿರಣ ಸೋರಿಕೆಯಾಗಿದ್ದು ರಾಷ್ಟ್ರದಾದ್ಯಂತ ಏಕಾಏಕಿ ಪರಮಾಣು ಭೀತಿ ಉಂಟಾಗಿದೆ. ಮುನ್ನೆಚ್ಚರಿಕೆಯ ಕ್ರಮವಾಗಿ ಫುಕುಶಿಮಾ ಸ್ಥಾವರದ ಸುತ್ತಮುತ್ತಲ 10 ಕಿ.ಮೀ. ವ್ಯಾಪ್ತಿಯಲ್ಲಿರುವ ನಲವತ್ತೈದು ಸಾವಿರ ನಾಗರಿಕರನ್ನು ಸ್ಥಳಾಂತರಿಸುವ ಕಾರ್ಯ ಈಗಾಗಲೇ ನಡೆಯುತ್ತಿದೆ. ಸ್ಥಾವರದೊಳಗಿನ ಯುರೇನಿಯಂ ಇಂಧನ ಕರಗುವುದನ್ನು ತಡೆಗಟ್ಟುವುದು ನಮ್ಮ ಮೊದಲ ಕರ್ತವ್ಯವಾಗಿದೆ."

ಮೆಹತಾ ಮಾತಾಡುವುದನ್ನು ನಿಲ್ಲಿಸಿ, ತನ್ನ ಮುಂದೆ ಕುಳಿತಿದ್ದ ಐವತ್ತು ಜನ ವಿಜ್ಞಾನಿಗಳ ಮುಖವನ್ನು ದಿಟ್ಟಿಸಿದರು. ಅವರಲ್ಲಿ ಜಿತೇಂದ್ರ, ಶ್ಯಾಮಲಾ ಕೂಡ ಇದ್ದರು.

ಮೆಹತಾ ತಮ್ಮ ಮಾತನ್ನು ಮತ್ತೆ ಮುಂದುವರೆಸಿದರು.

"ಮಿತ್ರರೇ, ಈಗ ನಾವು ರಣರಂಗದಲ್ಲಿದ್ದೇವೆ. ಸಮರೋಪಾದಿಯದಲ್ಲಿ ಕೆಲಸ ಮಾಡಬೇಕಿದೆ. ಮನೋಸಂಕಲ್ಪ, ಸಾಹಸ ಇವೆರಡೇ ಈಗ ನಮ್ಮ ಆಯುಧಗಳು. ಅಣು ಸ್ಥಾವರಗಳಿಂದ ವಿಕಿರಣ ಸೋರಿಕೆಯಾಗದಂತೆ ತಡೆಯುವ ಪ್ರಯತ್ನ ನಾವು ಮಾಡಬೇಕಿದೆ. ಈ ಯತ್ನದಲ್ಲಿ ನಾವು ಪ್ರಾಣವನ್ನೂ ಕಳೆದುಕೊಳ್ಳಬೇಕಾಗಬಹುದು. ಆದರೆ, ಅದು ವೀರೋಚಿತ ಮರಣ! ಜಗತ್ತು, ಅದರಲ್ಲೂ ಮುಖ್ಯವಾಗಿ ಜಪಾನಿನ ಪ್ರಜೆಗಳು ನಮ್ಮನ್ನು ನೆನಪಿಟ್ಟುಕೊಳ್ಳುತ್ತಾರೆ. ನಮ್ಮ ಶವಗಳು ಸಮಾಧಿ ಸೇರಿದರೂ ನಮ್ಮ ಹೆಸರು ಚರಿತ್ರೆಯ ಪುಟಗಳನ್ನು ಸೇರುತ್ತದೆ. ನಿಮ್ಮಲ್ಲಿ ಯಾರಿಗಾದರೂ ಈ ಯೋಜನೆಯಲ್ಲಿ ಕೆಲಸ ಮಾಡಲು ಇಷ್ಟವಿಲ್ಲದಿದ್ದರೆ ಈಗಲೇ ಹೊರಟುಹೋಗಬಹುದು..."

ಸಭೆಯಲ್ಲಿದ್ದ ವಿಜ್ಞಾನಿಗಳೆಲ್ಲ ತಮ್ಮ ಬಲಗೈಗಳನ್ನು ಮೇಲೆತ್ತಿ, "ನಾವು ನಿಮ್ಮೊಡನೆ ಇದ್ದು, ಫುಕುಶಿಮಾವನ್ನು ಕಾಪಾಡಲು ಸಹಕರಿಸುತ್ತೇವೆ" ಎಂದು ಒಕ್ಕೊರಲಿನಿಂದ ಘೋಷಿಸಿದರು. ಮೆಹತಾ ಮುಖ ಸಂತೋಷದಿಂದ ಅರಳಿತ್ತು, ಎದೆ ಗರ್ವದಿಂದ ಉಬ್ಬಿತ್ತು.

"ಈಗ ನಾನು ಇಲ್ಲಿನ ಪರಿಸ್ಥಿತಿಯನ್ನು ವಿವರಿಸುತ್ತೇನೆ. ಪರಮಾಣು ಸ್ಥಾವರಗಳನ್ನು ತಕ್ಷಣ ನಿಲ್ಲಿಸಲಾಗಿದೆ. ಫುಕುಶಿಮಾ ಸ್ಥಾವರಗಳಲ್ಲಿ ಶೈತ್ಯವ್ಯವಸ್ಥೆ ಬಹಳ ಮುಖ್ಯ ಎನ್ನುವುದು ನಿಮಗೆಲ್ಲ ತಿಳಿದಿರುವ ವಿಷಯ. ಸ್ಥಾವರಕ್ಕೆ ತಂಪು ನೀರನ್ನು ಊಡುವ ಯಂತ್ರಗಳು ಸುನಾಮಿ ಹೊಡೆತಕ್ಕೆ ಕೊಚ್ಚಿಕೊಂಡು ಹೋಗಿವೆ. ವಿದ್ಯುತ್ ಕೈಕೊಟ್ಟಿದೆ. ಹೀಗೆ ಒಂದಲ್ಲ ಎರಡಲ್ಲ ನೂರಾರು ತೊಂದರೆಗಳು. ಶೈತ್ಯಾಗಾರದ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ ಎರಡೂ ಹಾನಿಗೊಂಡಿವೆ. ಭೂಕಂಪದಿಂದಾಗಿ ಪರಮಾಣು ಕಂಬಿಗಳು ವಾತಾವರಣಕ್ಕೆ ತೆರೆದುಕೊಂಡಿವೆ. ಜತೆಗೆ ಸ್ಥಾವರದಲ್ಲಿದ್ದ ನೀರು ಆವಿಯಾದ್ದರಿಂದ ಪರಮಾಣು ಕರಗಿದೆ. ಇದರಿಂದ ಸ್ಥಾವರದೊಳಗಿನ ಯುರೇನಿಯಂ ಇಂಧನವೂ ಕರಗಿದೆ. ಅಣು ವಿಕಿರಣದ ಸೋರಿಕೆ ಪ್ರಾರಂಭವಾಗಿದೆ. ಒತ್ತಡದ ಪರಿಣಾಮವಾಗಿ ಕೋರ್ ಭಾಗದ ಸುತ್ತಲಿನ ಗೋಡೆಗಳು, ಮೇಲ್ಛಾವಣಿ ಧ್ವಂಸಗೊಂಡಿವೆ. ಆದರೆ, ಸ್ಥಾವರಗಳಿದ್ದ ಲೋಹದ ಛೇಂಬರ್ ಸ್ವಲ್ಪವೂ ಹಾನಿಯಾಗದೆ ಉಳಿದಿರುವುದು ನಮ್ಮ ಅದೃಷ್ಟ. ಇಲ್ಲದಿದ್ದರೆ ಈ ಸಭೆ ನಡೆಯುತ್ತಿರಲಿಲ್ಲ. ಲಕ್ಷಗಟ್ಟಲೆ ಮಿಲ್ಲಿರೆಮ್ಸ್ ವಿಕಿರಣವನ್ನು